ಇಂಗ್ಲಿಷ್, ಹಿಂದಿ ಮತ್ತು ಸಂಸ್ಕೃತದ ಕೃತಿಗಳನ್ನು ಕನ್ನಡಕ್ಕೆ ತಂದುಕೊಡುತ್ತಿರುವ ಡಾ. ಆರ್.ಲಕ್ಷ್ಮೀನಾರಾಯಣ ಅವರು ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಪ್ರಾಧ್ಯಾಪಕರಾಗಿ, ಪ್ರಿನ್ಸಿಪಾಲ್ ಮತ್ತು ಜಂಟಿ ನಿರ್ದೇಶಕರಾಗಿ ಕಾರ್ಯನಿರ್ವಹಿಸಿ ಪ್ರಸ್ತುತ ನಿವೃತ್ತರು. 20ಕ್ಕೂ ಹೆಚ್ಚು ಕೃತಿಗಳನ್ನು ಅನುವಾದಿಸಿದ್ದು ಸ್ವತಂತ್ರ ಕೃತಿಗಳನ್ನೂ ರಚಿಸಿದ್ದಾರೆ. ಕುಂತಕನ 'ವಕ್ರೋಕ್ತಿ ಜೀವಿತ'ದ ಕನ್ನಡ ಅನುವಾದಕ್ಕೆ 2004ರಲ್ಲಿ ರಾಜ್ಯಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಅದೇ ಕೃತಿಗೆ 2007ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿದೆ. ಕಿರಣ್ ನಗರ್‌ಕರ್ ಅವರ 'ಕಕೋಲ್ಡ್' ಕಾದಂಬರಿಯನ್ನು ಇಂಗ್ಲಿಷಿನಿಂದ 'ಬೇಗುದಿ' ಎಂಬ ಹೆಸರಿನಲ್ಲಿ ಅನುವಾದಿಸಿದ್ದು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಕಟಿಸಿದೆ. ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಗೌರವ ಪ್ರಶಸ್ತಿ ಪುರಸ್ಕೃತರು.

ಬೆಂಕಿ ಕಾಯಿಸಿಕೊಳ್ಳುತ್ತಿದ್ದ. ಸ್ವಲ್ಪ ಹೊತ್ತಿನಲ್ಲೇ ಅವನು ಎರಡು ಪದರದ ಚಾದರವನ್ನು ಮೈ ಮೇಲಿನಿಂದ ತೆಗೆದು ಬಗಲಿನಲ್ಲಿಟ್ಟುಕೊಂಡ. ನಿನ್ನ ಮನಸ್ಸಿಗೆ ಬಂದದ್ದನ್ನು ಮಾಡು ಎಂದು ಥಂಡಿಗೆ ಸವಾಲು ಹಾಕುತ್ತಿದ್ದಾನೇನೋ ಎಂಬಂತೆ ಕಾಲನ್ನು ಮುಂದಕ್ಕೆ ಚಾಚಿದ. ಶೈತ್ಯದ ಅಪಾರ ಶಕ್ತಿಯನ್ನು ಸೋಲಿಸಿದ ವಿಜಯದ ಹೆಮ್ಮೆಯನ್ನು ಹೃದಯದಲ್ಲಿ ಅಡಗಿಸಿಟ್ಟುಕೊಳ್ಳದಾದ.

ಜಬರನಿಗೆ ಹೇಳಿದ, 'ಯಾಕೋ ಜಬರಾ ಈಗ ಚಳಿ ಆಗ್ತಾ ಇಲ್ಲವೇನೋ?'

ಜಬರಾ, 'ಈಗ ಅದೆಲ್ಲಿ ಚಳಿ ಆಗುತ್ತಾನೇ ಇರುತ್ತೆ' ಎಂದು ಹೇಳುತ್ತಿದ್ದಾನೋ ಎಂಬಂತೆ ಕುಂಯ್ ಕುಂಯ್ ಎಂದು ಸದ್ದುಮಾಡಿದ.

'ಒಳ್ಳೇದು ಬಾ ಇಲ್ಲಿ ಈ ಅಗ್ನಿ ಕುಂಡವನ್ನು ಹಾರಿ ದಾಟಿಬಿಡೋಣ. ಯಾರು ದಾಟುತ್ತಾರೆ ಅಂತ ನೋಡ್ಡೋಣ. ಮಗನೆ ನೀನೇನಾದರೂ ಸುಟ್ಟುಕೊಂಡರೆ ನಾನು ಔಷಧಿ ಕೊಡಿಸಲ್ಲ.'

ಜಬರಾ ಬೆಂಕಿಯ ಜ್ವಾಲೆಯ ಕಡೆಗೆ ಕಾತರದ ಕಣ್ಣಿಂದ ನೋಡಿತು. "ನಾಳೆ ಬೆಳಿಗ್ಗೆ ಮುನ್ನಿಗೆ ಹೇಳಕೂಡದು. ಹೇಳಿದರೆ ಜಗಳ ಮಾಡ್ತಾಳೆ"

ಹಾಗಂತ ಹೇಳುತ್ತ ಅವನು ಮೇಲಕ್ಕೆ ನೆಗೆದು ಅಗ್ನಿ ಕುಂಡದ ಮೇಲಿನಿಂದ ಆರಾಮವಾಗಿ ಅದನ್ನು ದಾಟಿಬಿಟ್ಟ. ಕಾಲಿಗೆ ಒಂದು ಚೂರು ಬೆಂಕಿಯ ಜ್ವಾಲೆ ತಾಕಿತು. ಆದರೆ, ಅದೇನೂ ಲೆಕ್ಕಕ್ಕಿರಲಿಲ್ಲ. ಜಬರಾ ಬೆಂಕಿಯ ಸುತ್ತ ಸುತ್ತಿ ಅವನ ಹತ್ತಿರಕ್ಕೆ ಬಂದು ನಿಂತುಕೊಂಡಿತು.

'ನಡಿ ನಡಿ ಇದು ಸರಿಹೋಗಲಿಲ್ಲ. ಮೇಲಿನಿಂದ ಹಾರಿಕೊಂಡು ಬಾ' ಎಂದು ಹಲ್ಕೂ ಹೇಳಿದ. ಅದು ಮತ್ತೆ ಮೇಲೆ ಹಾರಿ ಬೆಂಕಿಯ ಕುಂಡದ ಇತ್ತ ಬಂದೇಬಿಟ್ಟಿತು.

ಎಲೆಗಳು ಸುಟ್ಟು ಹೋಗಿದ್ದವು. ತೋಟದಲ್ಲಿ ಮತ್ತೆ ಕತ್ತಲೆ ಕವಿಯಿತು. ಬೂದಿಯ ಕೆಳಗಡೆ ಅಲ್ಪ ಸ್ವಲ್ಪ ಬೆಂಕಿ ಉಳಿದಿತ್ತು. ಗಾಳಿ ಬೀಸಿದಾಗ ಸ್ವಲ್ಪ ಹೊತ್ತಿಕೊಳ್ಳುತ್ತಿತ್ತು. ಆದರೆ, ಮರುಕ್ಷಣದಲ್ಲೇ ಕಣ್ಣು ಮುಚ್ಚಿಕೊಳ್ಳುತ್ತಿತ್ತು.

ಹಲ್ಕೂ ಮತ್ತೆ ಚಾದರವನ್ನು ಹೊದ್ದುಕೊಂಡು ಬಿಸಿ ಬೂದಿಯ ಬಳಿ ಕುಳಿತುಕೊಂಡ. ಕುಳಿತಿದ್ದಂತೆಯೇ ಒಂದು ಹಾಡನ್ನು ಗುನುಗತೊಡಗಿದ. ಅವನ ದೇಹದಲ್ಲಿ ಬಿಸುಪು ಬಂದುಬಿಟ್ಟಿತ್ತು. ಆದರೆ, ಥಂಡಿ ಹೆಚ್ಚಾಗುತ್ತಿದ್ದಂತೆಲ್ಲ ಅವನಿಗೆ ನಿದ್ದೆ ಬರತೊಡಗಿತು.

ಅದೇ ಸಮಯದಲ್ಲಿ ಜಬರಾ ಜೋರುಜೋರಾಗಿ ಬೊಗಳುತ್ತ ಹೊಲದ ಕಡೆಗೆ ಓಡಿತು. ಪ್ರಾಣಿಗಳ ಒಂದು ಹಿಂಡು ಅವನ ಹೊಲಕ್ಕೆ ನುಗ್ಗಿದೆ ಎಂದು ಹಲ್ಕೂಗೆ ಅನಿಸತೊಡಗಿತು. ಬಹುಶಃ ನೀಲಗಾಯ್‌ಗಳ ಹಿಂಡು ಇರಬೇಕು. ಅವುಗಳ ನೆಗೆಯುವ, ಓಡುವ ಸದ್ದುಗಳು ಸ್ಪಷ್ಟವಾಗಿ ಕಿವಿಗೆ ಬೀಳುತ್ತಿತ್ತು. ಆಮೇಲೆ ಅವು ಹೊಲದಲ್ಲಿ ಮೇಯುತ್ತಿವೆ ಎನಿಸತೊಡಗಿತು. ಅವುಗಳು ಬೆಳೆ ಅಗಿಯುತ್ತಿರುವ ಚರಚರ ಸದ್ದು ಕೇಳಿಸತೊಡಗಿತು.

ಅವನು ಮನಸ್ಸಿನಲ್ಲಿ, 'ಇಲ್ಲ. ಜಬರಾ ಇರೋವಾಗ ಯಾವ ಪ್ರಾಣೀನೂ ಹೊಲದೊಳಕ್ಕೆ ಬರಲು ಸಾಧ್ಯವಿಲ್ಲ. ಅದನ್ನು ಕಿತ್ತೇ ಹಾಕಿಬಿಡಲಿ. ನನಗೆ ಮೋಸ ಆಗ್ತಾ ಇದೆ. ಎಲ್ಲಿ! ಈಗೇನೂ ಕೇಳಿಸ್ತಾನೇ ಇಲ್ಲವಲ್ಲ. ನನಗೂ ಅದೆಂಥಾ ಮೋಸ ಆಗೋಯ್ತು' ಅಂತ ಅಂದುಕೊಂಡ.

'ಜಬರಾ ಜಬರಾ' ಅಂತ ಜೋರಾಗಿ ಒಂದು ಕೂಗು